Kristu Jayanti College
AUTONOMOUS Bengaluru
Accredited 'A' Grade by NAAC | Affiliated to Bangalore University

# DEPARTMENT OF HUMANITIES (KANNADA)

## Kannada Habba 2016

## ಕನ್ನಡ ಹಬ್ಬ ವರದಿ-೨೦೧೬

**ಸ್ಥಳ: ಮುಖ್ಯ ಸಭಾಂಗಣ, ಕ್ರಿಸ್ತು ಜಯಂತಿ ಕಾಲೇಜು, ಬೆಂಗಳೂರು**

**ದಿನಾಂಕ: ೧೫-೧೨-೨೦೧೬ ಬುಧವಾರ ಸಮಯ: ಮಧ್ಯಾಹ್ನ ೨.೦೦ ರಿಂದ ೫.೦೦ ಗಂಟೆ**

Objective ಕ್ರಿಸ್ತು ಜಯಂತಿ ಕಾಲೇಜು, ಕನ್ನಡ ವಿಭಾಗದಲ್ಲಿ ದಿನಾಂಕ ೧೫ಡಿಸೆಂಬರ್,೨೦೧೬ ರಂದು ಕನ್ನಡ ಹಬ್ಬ ಕಾರ್ಯಕ್ರಮವನ್ನು ಪ್ರತಿ ವರ್ಷದಂತೆ ಈ ವರ್ಷವೂ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀಮತಿ ಸ್ಪರ್ಶ ಆರ್.ಕೆ. ಗಾಯಕಿ ಮತ್ತು ನಟಿ, ಬೆಂಗಳೂರು. ಇವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಉಪ ಪ್ರಾಂಶುಪಾಲರಾದ ರೆ. ಫಾ. ಅಗಸ್ಟಿನ್‌ಜಾರ್ಜರವರು ವಹಿಸಿಕೊಂಡಿದ್ದರು. ವೇದಿಕೆಯಲ್ಲಿ ವಿಭಾಗದ ಮುಖ್ಯಸ್ಥರಾದ ಶ್ರೀ ಸರ್ವೇಶ್ ಬಿ.ಎಸ್. ಅವರು ಮತ್ತು ವಿದ್ಯಾರ್ಥಿ ಮುಖಂಡರಾದ ಕುಮಾರ ಚೇತನ್ ಮತ್ತು ಕುಮಾರಿ ಮಧುಶ್ರೀ ಉಪಸ್ಥಿತರಿದ್ದರು. ಕಾರ್ಯಕ್ರಮ ಬಿಬಿಎಂ ವಿದ್ಯಾರ್ಥಿನಿ ಪ್ರಿಯಾಬಾಯಿ ಅವರ ಪ್ರಾರ್ಥನಾ ಗೀತೆಯೊಂದಿಗೆ ಆರಂಭವಾಯಿತು. ಈ ಕನ್ನಡ ಹಬ್ಬಕ್ಕೆ ಎಲ್ಲರನ್ನೂ ಸ್ವಾಗತಿಸಿದವರು ವಿಭಾಗದ ಉಪನ್ಯಾಸಕರಾದ ಶ್ರೀ ಸರ್ವೇಶ್ ಬಿ.ಎಸ್. ರವರು. ಪ್ರಾಸ್ತಾವಿಕ ಭಾಷಣ ಮಾಡಿದ ರೆ,ಫಾ. ಅಗಸ್ಟಿನ್‌ಜಾರ್ಜರವರು ಕನ್ನಡ ಭಾಷೆಗೆ ಕೊಡುಗೆ ನೀಡಿದ ಕುವೆಂಪು ಬೇಂದ್ರೆ ಮತ್ತು

ಕಾರಂತ ಮುಂತಾದ ಮಹನೀಯರನ್ನು ನೆನೆದರು. ಹಾಗೆ ಮಾತ್ರ ಭಾಷೆಯನ್ನು ಬಳಸಿ ಬೆಳಸಬೇಕು ಎಂದರು. ವಿದ್ಯಾರ್ಥಿಗಳು ಜವಾಬ್ದಾರಿಯಿಂದ ವರ್ತಿಸಿ ತಮ್ಮ ಗುರಿಗಳನ್ನು ಸಾಧಿಸಬೇಕೆಂದು ಕರೆ ಕೊಟ್ಟರು.

Activity detail: ನಂತರ ಮುಖ್ಯ ಅತಿಥಿಗಳ ಭಾಷಣ ಮಾಡಿದ ಶ್ರೀಮತಿ ಸ್ಪರ್ಶ ಆರ್.ಕೆ. ಅವರು ತಮ್ಮ ಭಾಷಣದಲ್ಲಿ ಕನ್ನಡ ಭಾಷೆ ಎದುರಿಸುತ್ತಿರುವ ಸವಾಲುಗಳನ್ನು ತಿಳಿಸಿದರು. ಕನ್ನಡ ಭಾಷೆ ಶಿಕ್ಷಣದಲ್ಲಿ ಹೆಚ್ಚು ಸ್ಥಾನ ಪಡೆಯದಿರಲು ಕಾರಣ ನಮ್ಮ ವ್ಯವಸ್ಥೆ ಎಂದರು. ಕನ್ನಡ ಭಾಷೆಗೆ ಮಿಷನರಿಗಳ ಕೊಡುಗೆಯನ್ನು ಸ್ಮರಿಸಿದರು. ಕಿಟೆಲ್ ತಯಾರಿಸಿದ ಕನ್ನಡ ನಿಘಂಟು ಅನೇಕ ಭಾಷೆಗಳಿಗೆ ಸೇತುಬಂಧ ಆಯಿತು ಎಂದರು. ಕನ್ನಡವನ್ನು ಅಭಿಮಾನದಿಂದ ಮಾತ್ರ ನೊಡದೆ ಅದು ಬಳಕೆಯ ಭಾಷೆ ಆಗಬೇಕು ಎಂದರು. ನಾಡಿನ ಖ್ಯಾತ ಕವಿಗಳಾದ ಕುವೆಂಪು ಕನ್ನಡಕ್ಕೆ ಒಲಿದ ಬಗೆಯನ್ನು ವಿವರಿಸಿದರು. ಹಾಗೆ ನಮ್ಮ ದಿನ ನಿತ್ಯದ ಬದುಕಿನಲ್ಲಿ ಕನ್ನಡ ಬಳಸಿದರೆ ಮಾತ್ರ ಕನ್ನಡ ಉಳಿಯುತ್ತದೆ ಎಂಬ ಕಿವಿ ಮಾತನ್ನು ಹೇಳಿದರು. ಅವರ ತಿಮ್ಮನ ಕುರಿತು ಹೇಳಿದ ಕಥೆಗಳು ಪ್ರೇಕ್ಷಕರಲ್ಲಿ ಹಾಸ್ಯ ಪ್ರಜ್ಞೆಯನ್ನು ಮೂಡಿಸಿತು. ನಂತರ ವಿಭಾಗದಲ್ಲಿ ನಡೆಸಿದ ಭಾಷಣ ಸ್ಪರ್ಧೆ, ನಾಟಕ, ಸೃಜನಾತ್ಮಕ ಬರಹ, ಗಾಯನ, ರಸಪ್ರಶ್ನೆ ಮುಂತಾದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದನ್ನು ಉಪನ್ಯಾಸಕರಾದ ಶ್ರೀ ನಾರಾಯಣಸ್ವಾಮಿ. ಎಂ ಅವರು ನಡೆಸಿ ಕೊಟ್ಟರು. ಅಂತಿಮವಾಗಿ ಕಾರ್ಯಕ್ರಮದ ವಂದನಾರ್ಪಣೆಯನ್ನು ಉಪನ್ಯಾಸಕರಾದ ಶ್ರೀ ಚಂದ್ರಶೇಖರ್ ಅವರು ನಡೆಸಿಕೊಟ್ಟರು. ಇದರ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಂಜೆ ೫.೦೦ ಗಂಟೆಗೆ ಕಾರ್ಯಕ್ರಮ ಯಶಸಿಯಾಗಿ ಮುಗಿಯಿತು.

Outcome: ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಅಭಿವ್ಯಕ್ತಿ ಕ್ರಮ ಜಾಗೃತಗೊಳಿಸುವುದು ಮತ್ತು ಅವರಲ್ಲಿ ಸಾಹಿತ್ಯದ ಅಭಿರುಚಿ ಮೂಡಿಸುವುದು. ಸಾಂಸ್ಕೃತಿಕ ವೈವಿಧ್ಯತೆಯ ವಿವಿಧ ಸ್ಪರ್ಧೆಗಳ ಮೂಲಕ ಸಾಹಿತ್ಯದ ಕಲಿಕೆಗೆ ಪ್ರೋತ್ಸಾಹ ನೀಡುವುದು.

Feedback: ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದು. ನಾಡಿನ ಸಂಸ್ಕೃತಿಯ ಅರಿವು ಮೂಡಿಸುವುದು ಸಾಹಿತ್ಯದ ಗಣ್ಯವ್ಯಕ್ತಿಗಳ ಮೂಲಕ ನಾಡು ನಲುಡಿಗಳ ಪರಿಚಯ ಮಾಡಿಕೊಳ್ಳುವುದು.

ವರದಿ ತಯಾರಕರು

ನಾರಾಯಣಸ್ವಾಮಿ ಎಂ




Kristu Jayanti College